846

ಮೈಸೂರ ಗೆಜೆಟ್ಟ.

ಸರ್ಕಾರದಿಂದ ಪ್ರಾಯಿಷ್ಠಿದ್ದು.

ಬೆಂಗಳೂರು, ಶನಿವಾರ ಡಿಸಂಬರ್ ತಾ|| 20, ಸ್ಯ 1890.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೩ನೇ ಭಾಗ

ಘನವನ್ನೈದಿದ ಶ್ರೀಮತ್ ಮೈಸೂರ್ ಮಹಾರಾಜರವರಿಂದ ಮಂಜೂರಾದ ರೆಗ್ಯುಲೇಷ್ಯನ್‌ಗಳು.

ಮೈಸೂರ್ ಗವರ್ನಮೆಂಟ್

ಲೆಜಿಸ್ಲೇಟಿವ್ ಇಲಾಖೆ.

REGULATION NO. VI. OF 1890.

1890ನೇ ಇಸವಿಯ VIನೇ ನಂಬರ್ ರೆಗ್ಯುಲೇಷ್ಯನ್.

ಇದರಡಿ ಕಂಡ ರೆಗ್ಯುಲೇಷ್ಯನ್ 1890ನೇ ಇಸವಿ ಡಿಸಂಬರ್ 5ನೇ ಮುರ್ತುಂನಲ್ಲಿ ಘನವನ್ನೈದಿದ ಶ್ರೀಮತ್ ಮಹಾರಾಜರಾಜಾ ಸಾಹೆಬ್ ಬಹದೂರವರ ಮಂಜೂರಾತಿಯೆಂ ಪಡೆದು ಸಕಲ ಜನಗಳ ತಿಳುವಳಿಕೆಯಬಗ್ಗೆ ಇದರಿಂದ ಪ್ರಕಟಿಸಲ್ಪಟ್ಟರುತಿದೆ :—

A Regulation to consolidate and amend the law relating to Arms, Ammunition and Military Stores.

ಆಯುಧಗಳು, ಅಗ್ನಿ ಸಾಮಗ್ರಿಗಳು, ಸೈನ್ಯಸರಂಜಾಮುಗಳು, ಇವುಗಳಿಗೆ ಸಂಬಂಧಪಡುವ ಕಾನೂನನ್ನು ಒಟ್ಟುಪಡಿಸಿ ದುರಸ್ತು ಮಾಡಲಿಕ್ಕೆ ಉಂಟಾದ ರೆಗ್ಯುಲೇಷ್ಯನ್.

ಆಯುಧಗಳು, ಅಗ್ನಿ ಸಾಮಗ್ರಿಗಳು, ಸೈನ್ಯ ಸರಂಜಾಮುಗಳು, ಇವುಗಳಿಗೆ ಸಂಬಂಧಪಡುವ ಕಾನೂನನ್ನು ಒಟ್ಟುಪಡಿಸಿ ದುರಸ್ತು ಮಾಡುವದು ಯುಕ್ತವಾಗಿರುವದರಿಂದ, ಘನವನ್ನೈದಿದ ಶ್ರೀಮತ್ ಮಹಾರಾಜ ರಾಜಾಸಾಹೆಬ್‌ಬಹದ್ದೂರವರು ಇದರಿಂದ ನಿರ್ಣೈಸುವದೇನಂದರೆ :—

ಪೀಠಿಕೆ.

I.—Preliminary.

1.—ಅವತರಣಿಕೆ.

1. ಈ ರೆಗ್ಯುಲೇಷನ್ನನ್ನು 1890ನೇ ಇಸವಿಯ "ಮೈಸೂರು ಶಿಮೆಯ ಆಯುಧಗಳ ರೆಗ್ಯುಲೇಷ್ಯನ್" ಎಂಬದಾಗಿ ಕರೆಯಬಹುದು. ಇದು ಮೈಸೂರು ದೇಶದೊಳಗೆಲ್ಲಾ ವ್ಯಾಪಿಸುತಿದೆ.

ಚಿಕ್ಕ ಹೆಸರು.
ಸ್ಥಳ ವ್ಯಾಪ್ತಿ.